ಅವರು ಇಲ್ಲಿನ ಕತೆ ಬರೆಯಬಲ್ಲರು. ನಾನು ವಿಪರೀತ ಶ್ರಮ ಹಾಕಿ ಬರೆಯಬೇಕಾಗುತ್ತದೆ. ಕೆಲವೊಬ್ಬರು ಹೇಳ್ತಾರೆ, 'ಅಷ್ಟು ಚಿಕ್ಕ ಊರಲ್ಲಿ ಕತೆಗಳು ಹೆಚ್ಚು ಇರುವುದಿಲ್ಲ' ಅಂತ. ಅದೆಲ್ಲಾ ಸುಳ್ಳು. ಇಬ್ಬರು ಮನಷ್ಯರಿದ್ದರೂ ಸಾಕು, ಅಲ್ಲಿ ಎರಡು ವಿಶ್ವಗಳು ಅರಳಿರುತ್ತವೆ. ಇವತ್ತು ಬೆಳಿಗ್ಗೆ ನಾನು ಈ ಊರಲ್ಲಿ ಸಾಕಷ್ಟು ಅಡ್ಡಾಡಿದೆ. ನನಗೆ ಗಾಡಿಗಳಲ್ಲಿ ಊರನ್ನು ಸುತ್ತುವುದು ಇಷ್ಟವಾಗುವುದಿಲ್ಲ. ಅರಮನೆಯ ತನಕ ಕಾಲ್ನಡಿಗೆಯಲ್ಲಿ ಹೋಗಿ, ಮತ್ತೊಂದು ಹೊಸ ದಾರಿಯಲ್ಲಿ ವಾಪಾಸು ಬಂದೆ. ನನಗೆ ಗೂಗಲ್ ಮ್ಯಾಪ್ ನೋಡುವುದು ಇಷ್ಟವಾಗುವುದಿಲ್ಲ. ಜನರನ್ನು ದಾರಿ ಕೇಳುತ್ತಾ ಹೋಗುತ್ತೇನೆ. ನಾನು ಬಾಲ್ಯದಲ್ಲಿ ನೋಡಿದ ಮೈಸೂರಿಗೂ, ಈಗಿನ ಮೈಸೂರಿಗೂ ಆಗಿರುವ ವ್ಯತ್ಯಾಸವನ್ನು ನೋಡುತ್ತಾ ಸಂಭ್ರಮಿಸಿದೆ. ಆದರೂ ಮುಂಬಯಿಗೆ ಹೋಲಿಸಿದರೆ ಎಲ್ಲವೂ ಪುಟ್ಟ ಪುಟ್ಟ ಗಾತ್ರದಲ್ಲಿ ಕಾಣುತ್ತವೆ. ಆ ಕಾಂಪೌಂಡ್ ಗೋಡೆಯ ದೊಡ್ಡ ಮನೆ, ಚಿಕ್ಕ ಕಟ್ಟಡಗಳು, ಚಿಕ್ಕ ಅಂಗಡಿಗಳು – ಎಲ್ಲವೂ ನನಗೆ ಇಷ್ಟವಾದವು. ಸಾಕಷ್ಟು ಫೋಟೋ ತೆಗೆದುಕೊಂಡೆ. ಏನೇ ಆದರೂ ಅವೆಲ್ಲವೂ ನನಗೆ ಒಂದು ಕಿಂಡಿಯ ಮೂಲಕ ಮೈಸೂರನ್ನು ನೋಡಿದಂತೆಯೇ ಸರಿ. ನಮಗೆಲ್ಲರಿಗೂ ಯಾರೋ ಆಡಲು ಕೆಲವೊಂದು ಕಾರ್ಡುಗಳನ್ನು ಹಂಚಿದ್ದಾರೆ. ಅವುಗಳನ್ನೇ ಬಳಸಿ ಆಟ ಆಡಬೇಕು. ಪ್ರತಿಯೊಂದು ಕಾರ್ಡೂ ನಿರ್ಬಂಧವೇ! ಯಾವ ಲೇಖಕನಿಗೆ ನಿರ್ಬಂಧಗಳಿಲ್ಲ?

ನಮಗೆ ಅತ್ಯಂತ ಚಿರಪರಿಚಿತ ಸಂಗತಿಗಳನ್ನೇ ಬರೆಯಬೇಕೆನ್ನಿಸುತ್ತೆ. ಕೆಲವೊಮ್ಮೆ ರವಿ (ಸಿಂಗ್) ನಾನು ಬರೆದ ಏನನ್ನೋ ತೋರಿಸಿ 'ಹೀಗಂದರೇನು?' ಎಂದು ಕೇಳುತ್ತಾನೆ. 'ಅರೆ! ಅದು ಎಲ್ಲರಿಗೂ ಗೊತ್ತಿಲ್ಲವಾ?' ಎಂದು ನನಗಾಗ ಗೊಂದಲವಾಗುತ್ತದೆ. ನಿಜವಾದ ಸವಾಲೆಂದರೆ ನಾವು ಹೇಳುವುದನ್ನು ಎಲ್ಲರಿಗೂ ತಿಳಿಯುವಂತೆ ಹೇಳುವುದು. ಹಾಗಂತ 'ಇದು ಏನೆಂದರೆ...' ಎಂಬ ಮಾಸ್ತರ ಧ್ವನಿ ತೆಗೆದು ದೊಡ್ಡಣ್ಣನಾಗುವಂತಿಲ್ಲ. ಅವೆಲ್ಲಾ... ಹೌದು, ಮುಂಬಯಿ ನನಗೆ ನಿರ್ಬಂಧವೇ! ಹಾಗೆಯೇ ನಾನು ಗಂಡಸು ಎನ್ನುವುದೂ ನಿರ್ಬಂಧವೇ! ನಿಮ್ಮ ಅಸ್ತಿತ್ವದ ಪ್ರತಿ ಎಳೆಯೂ ನಿರ್ಬಂಧವೇ ಆಗಿದೆ. ಆದರೆ ಅದು ನೀವು ನಿಂತಿರುವ ಜಾಗ. ನಿಮ್ಮ ನಿಲುದಾಣದಿಂದಲೇ ನೀವು ಮಾತಾಡಬೇಕಾಗುತ್ತದೆ. ಅವುಗಳನ್ನು ಅರ್ಥಪೂರ್ಣವಾಗಿ ಬಳಸಿಕೊಂಡು ಬರವಣಿಗೆ ಮಾಡಬೇಕು.

